# ಒಳಗೊಳ್ಳುವ ಅವಕಾಶವಾಗಿ ಶಾಲೆ: | ನನ್ನ ಅನುಭವಗಳು

**ಸುಹೈಲ್ ಹಮೀದ್**

ಈಗ ನಮ್ಮ ಬಗ್ಗೆ ಆಲೋಚಿಸೋಣ. ನಮ್ಮ ಕುಟುಂಬದಲ್ಲಿ ಅಕ್ಷರಸ್ಥರ ಸಾಲಿನಲ್ಲಿ ನಾವು ಎಷ್ಟನೆಯ ಪೀಳಿಗೆಯವರು? ಈ ಪ್ರಶ್ನೆಗೆ ಉತ್ತರವು ನಮ್ಮ ಸಾರ್ವಜನಿಕ ವಿಶೇಷ ಸವಲತ್ತುಗಳನ್ನು ಗುರುತಿಸಲು ಇರುವ ಮಾರ್ಗಗಳಲ್ಲಿ ಒಂದು. ಜಾತಿಯ ಇಂಥ ಶ್ರೇಣೀಕೃತ ಸಾಮಾಜಿಕ ವರ್ಗೀಕರಣವು ಅಧಿಕಾರ ರಚನೆಗೆ ಸಂಬಂಧಿಸಿದಂತೆ, ಕಡಿಮೆ ಸಂಖ್ಯೆಯಲ್ಲಿರುವ ಹಲವಾರು ಸಮುದಾಯಗಳನ್ನು ಚಾರಿತ್ರಿಕವಾಗಿ ಮೂಲೆಗುಂಪು ಮಾಡಿದೆ. ಸಮುದಾಯಗಳು ಹಾಗು ಅವುಗಳ ಸಾಮಾಜಿಕ ಸವಲತ್ತುಗಳನ್ನು ರಾಜ್ಯದ ನಾನಾ ಸಂಸ್ಥೆಗಳಲ್ಲಿ ಅವುಗಳ ಪ್ರಾತಿನಿಧ್ಯದ ಆಧಾರದಲ್ಲೂ ನೋಡಬಹುದು. ಅದೇ ಹೊತ್ತಿನಲ್ಲಿ ಈ ಭಾರೀ ಅಂತರದ ಮೂಲವನ್ನು ಪತ್ತೆ ಹಚ್ಚಬೇಕು ಹಾಗು ಅದಕ್ಕೆ ಶಿಕ್ಷಣ ಸಂಸ್ಥೆಗಳಲ್ಲೇ ಚಿಕಿತ್ಸೆ ನೀಡಬೇಕು. ಈ ಲೇಖನದಲ್ಲಿ 2019–20ರ ಅವಧಿಯಲ್ಲಿ ನನ್ನ ಶಾಲೆಯಲ್ಲಿ ನಾನು ಸಾಕ್ಷೀಕರಿಸಿದ ಕೆಲವು ಘಟನೆಗಳ ಬಗ್ಗೆ ಹಾಗು ಇವು ಸಾಮಾಜಿಕವಾಗಿ ಬದಿಗೊತ್ತಲ್ಪಟ್ಟ ಸಮುದಾಯದ ವಿದ್ಯಾರ್ಥಿಗಳ ಬದುಕನ್ನು ಹೇಗೆ ಪ್ರತಿಫಲಿಸುತ್ತವೆ ಎಂಬುದರ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸುತ್ತೇನೆ. ಕೆಳಗಿನ ಘಟನೆಯು ನಾನು ಶಾಲೆಯೊಂದಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಭವಿಸಿತು.

ಶಿಕ್ಷಕರು ತರಗತಿಯಲ್ಲಿ ನಾನಾ  ವೃತ್ತಿಗಳ ಬಗ್ಗೆ ಚರ್ಚಿಸುತ್ತಿದ್ದರು. ನಿಮ್ಮ ತಂದೆ ಹಾಗುಸೋದರರು ಯಾವ ಕಸುಬು ಮಾಡುತ್ತಿದ್ದಾರೆ ಎಂದು ಅವರು ವಿದ್ಯಾರ್ಥಿಗಳನ್ನು ಪ್ರಶ್ನಿಸಿದರು.

’ಸರ್, ನನ್ನ ತಂದೆ ಕೃಷಿಕ’

’ಸರ್, ನನ್ನ ಸೋದರ ಟ್ರ್ಯಾಕ್ಟರ್ ಚಾಲಕ’

ಅಂಗಡಿ ವ್ಯಾಪಾರಿ, ಕಟ್ಟಡ ನಿರ್ಮಾಣ ಕಾರ್ಮಿಕ, ಪೇಂಟರ್, ಅಕ್ಕಿ ಗಿರಣಿ ನೌಕರ... ಎಂದೆಲ್ಲ ಉತ್ತರಗಳು ಕೊಠಡಿಯ ಬೇರೆಬೇರೆ ಭಾಗಗಳಿಂದ ಬಂತು.

’ಇದು ಇರುವುದು ಇದೇ ರೀತಿ. ಮನೆಯಲ್ಲಿರುವ ಪುರುಷರು ಕುಟುಂಬ ನಿರ್ವಹಣೆಗೆ ಬೇರೆಬೇರೆ ಕೆಲಸ ಮಾಡುತ್ತಾರೆ,’ ಎಂದು ಶಿಕ್ಷಕ ಹೇಳಿದರು.

ಒಂದು ಮಗು ಹೇಳಿತು, ’ನನ್ನ ತಂದೆ ಮೀನು ಹಿಡಿಯುತ್ತಾರೆ,’

ಇದಕ್ಕೆ ಶಿಕ್ಷಕನಿಂದ ಊಹಿಸಲೂ ಆಗದ ಪ್ರತಿಕ್ರಿಯೆ ಬಂದಿತು. ’ಹೌದು. ಇಂಥ ಕೆಲಸವನ್ನು ಮಾಡುವ ಜನರಿದ್ದಾರೆ. ಆದರೆ, ನಿಮ್ಮ ಜನ ಮಾತ್ರ ಈ ಕೆಲಸ ಮಾಡುತ್ತಾರೆ. ಬೇರೆಯವರು ಮಾಡುವುದಿಲ್ಲ.’

ಪ್ರಾಥಮಿಕ ಶಾಲೆಯ ಮಕ್ಕಳಿಗೆ ಸರ್ಕಾರಿ ನೌಕರನೊಬ್ಬನ ಸಾಮಾಜಿಕ ಶ್ರೇಣೀಕರಣ ಕುರಿತ ಇಂಥ ಆಘಾತಕಾರಿ ಹೇಳಿಕೆಗೆ ನಾನು ಸಾಕ್ಷಿಯಾಗಿದ್ದೆ. ತಾನು ಏನು ಹೇಳಿದೆ ಎನ್ನುವ ಬಗ್ಗೆ ಆತನಿಗೆ ಅರಿವಿಲ್ಲ ಎಂದು ನಾನು ಭಾವಿಸಲಾರೆ.

ಇನ್ನೊಂದು ಶಾಲೆಯಲ್ಲಿ ಒಂದು ವರ್ಷ ಕಾಲ ಸಹಾಯಕನಾಗಿ ನಾನು ಕೆಲಸ ಮಾಡಿದ್ದೆ. ಆ ಸ್ಥಳವು ಭತ್ತದ ಗದ್ದೆಗಳಿಂದ ಸುತ್ತುವರೆದಿತ್ತು ಮತ್ತು ಆ ಗ್ರಾಮದ ಮಧ್ಯದಲ್ಲಿ ನಾಲೆ ಹರಿಯುತ್ತಿತ್ತು. ನಾಲೆಯು ಥೇಲಿ–ಚಂದ್ರಾಕರ್ (ಒಬಿಸಿ ಸಮುದಾಯ) ವಸತಿಗಳನ್ನು ಸತ್ನಾಮಿ ಬಸ್ತಿ (ಹೆಚ್ಚಿನವರು ಪರಿಶಿಷ್ಟ ವರ್ಗಕ್ಕೆ ಸೇರಿದವರು) ವಸತಿಗಳಿಂದ ಪ್ರತ್ಯೇಕಿಸುತ್ತಿತ್ತು. ನಾನು ಮಾತನಾಡಿಸಿದ ಗ್ರಾಮಸ್ಥರು ಗ್ರಾಮದಲ್ಲಿ ಜಾತಿ ಆಚರಣೆಗಳು ಹಾಗು ಪ್ರತ್ಯೇಕಿಸುವಿಕೆ ಇಲ್ಲ ಎಂದಿದ್ದರೂ, ಸಮುದಾಯಗಳ ಭೌಗೋಳಿಕ ಪ್ರತ್ಯೇಕಿಸುವಿಕೆ ಅದರ ಇರುವಿಕೆಗೆ ಸಾಕ್ಷಿಯಾಗಿತ್ತು.

ಈ ಗ್ರಾಮದಲ್ಲಿ ಎರಡು ಪ್ರಾಥಮಿಕ ಶಾಲೆಗಳು ಇದ್ದವು. ಒಂದು ನಾಲೆಯ ಉತ್ತರ ಭಾಗದಲ್ಲಿ (ಸತ್ನಾಮಿ ಬಸ್ತಿ ಬಳಿ) ಹಾಗು ಇನ್ನೊಂದು ದಕ್ಷಿಣ ಭಾಗ (ಹೆಚ್ಚಾಗಿ ಓಬಿಸಿ ಸಮುದಾಯಗಳಿದ್ದ ಪ್ರದೇಶ)ದಲ್ಲಿತ್ತು. ನಾನು ಎರಡನೇ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೆ. ಶಾಲೆಗೆ ಗ್ರಾಮದ ಎಲ್ಲಾ ಭಾಗಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಆದರೆ, ಸತ್ನಾಮಿ ಬಸ್ತಿಯಿಂದ ಬರುತ್ತಿದ್ದವರು ಅತ್ಯಂತ ಕಡಿಮೆ ಹಾಗು ವಿದ್ಯಾರ್ಥಿಗಳು ತರಗತಿ ಕೊಠಡಿಯಲ್ಲಿ ಕುಳಿತುಕೊಳ್ಳುತ್ತಿದ್ದ ರೀತಿಯು ವ್ಯತ್ಯಾಸಗಳನ್ನು ಎತ್ತಿ ತೋರಿಸುವಂತಿತ್ತು.

ಒಂದು ಮತ್ತು ಎರಡನೇ ತರಗತಿಯಲ್ಲಿ ಇಬ್ಬರು ಬಾಲಕರು ಮತ್ತು ಒಬ್ಬಳು ಬಾಲಕಿ ಸಾಮಾನ್ಯವಾಗಿ ಒಟ್ಟಿಗೆ ಕುಳಿತುಕೊಳ್ಳುತ್ತಿದ್ದರು. ನಾಚಿಕೆಯ ಸ್ವಭಾವದ ಅವರು ಯಾರೊಡನೆಯೂ ಬೆರೆಯುತ್ತಿರಲಿಲ್ಲ; ತರಗತಿಯ ಒಂದು ಮೂಲೆಯಲ್ಲಿ ತಲೆ ತಗ್ಗಿಸಿಕೊಂಡು, ಕಣ್ಣಿಗೆ ಕಣ್ಣು ಬೆರೆಸದೆ ಕುಳಿತುಕೊಳ್ಳುತ್ತಿದ್ದರು. ಗ್ರಾಮದ ಒಂದೇ ಭಾಗದಿಂದ ಬರುತ್ತಿದ್ದ ಅವರು, ನೆರೆಹೊರೆಯವ–ರಾಗಿದ್ದರು. ಒಂದು ದಿನ ಸಂಭವಿಸಿದ ಘಟನೆ ಇದು.

ರಾಣಿ ಆ ದಿನ ತರಗತಿಗೆ ತಡವಾಗಿ ಬಂದಳು ಹಾಗು ಎರಡನೇ ಸಾಲಿನಲ್ಲಿ ಕುಳಿತಳು. ಹೆಚ್ಚಿನ ವಿದ್ಯಾರ್ಥಿಗಳು ಅಷ್ಟರೊಳಗೆ ಬಂದು ಕುಳಿತಿದ್ದರು. ರಾಣಿಯ ಪಕ್ಕದಲ್ಲಿದ್ದ ಬಾಲಕ, ಪ್ರತಿಭಟಿಸಿದ. ಆಕೆ ಅಲ್ಲಿ ಕುಳಿತುಕೊಳ್ಳುವುದು ಅವನಿಗೆ ಇಷ್ಟವಿರಲಿಲ್ಲ ಮತ್ತು ಎಂದಿನಂತೆ ಹಿಂದಿನ ಸಾಲಿನಲ್ಲಿ ಕುಳಿತುಕೊಳ್ಳಲು ಹೇಳಿದ. ಇದು ನಾವೆಲ್ಲರೂ ಕೇಳಬೇಕಾದ ಪ್ರಶ್ನೆ: ಬದಿಗೊತ್ತಲ್ಪಟ್ಟ ಸಮುದಾಯದ ಮಕ್ಕಳು ಏಕೆ ಯಾವಾಗಲೂ ತರಗತಿಯ ಮೂಲೆಯೊಂದರಲ್ಲೇ ಕುಳಿತು–ಕೊಂಡಿರುತ್ತಾರೆ? ರಾಣಿ ಇಂಥ ಪ್ರತಿಕ್ರಿಯೆಯನ್ನು ನಿರೀಕ್ಷಿಸಿರಲಿಲ್ಲ–ವೇನೋ. ಆಕೆ ತನ್ನ ಸ್ಥಾನವನ್ನು ಬದಲಿಸಿದ್ದು ಏಕೆ ಎನ್ನುವುದು ಆಗ ನನಗೆ ಗೊತ್ತಿರಲಿಲ್ಲ. ನಾನು ಸುಮ್ಮನಿದ್ದು, ಗಮನಿಸಲಾರಂಭಿಸಿದೆ: ಮುಂದೇನು ಆಗಲಿದೆ ಎನ್ನುವುದನ್ನು ತಿಳಿದುಕೊಳ್ಳಬೇಕಿತ್ತು. ಆ ಹುಡುಗನ ಮಾತು ವಿನಂತಿ ಆಗಿರಲಿಲ್ಲ: ಬೆದರಿಕೆಯಾಗಿತ್ತು. ಆಕೆ ಪ್ರತಿಭಟಿಸಲಿಲ್ಲ. ಎದ್ದು ಹೊರಡಲು ನಿಂತಳು. ಮಧ್ಯಪ್ರವೇಶಿಸಿದ ನಾನು, ನೀನು ಅಲ್ಲಿಂದ ಏಳಬೇಡ ಎಂದೆ. ಬಾಲಕ ನನ್ನ ಮಾತಿಗೂ ಪ್ರತಿಭಟಿಸಿದನು. ಆದರೆ ಆಕೆ ಅಲ್ಲಿ ಏಕೆ ಕೂರಬಾರದು ಎನ್ನುವ ನನ್ನ ಪ್ರಶ್ನೆಗೆ ಅವನಲ್ಲಿ ಉತ್ತರ ಇರಲಿಲ್ಲ.

ಆನಂತರ ಬಂದಿದ್ದು ಕೆಟ್ಟ ವರ್ತನೆ. ರಾಣಿಯ ಪಕ್ಕದಲ್ಲಿ ಕುಳಿತು–ಕೊಳ್ಳಲೇಬಾರದು ಎಂದು ನಿರ್ಧರಿಸಿದ್ದ ಆತ, ಪ್ರತಿದಿನ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದವನಿಗೆ ಸ್ಥಳ ಬದಲಾವಣೆ ಮಾಡಿಕೊಳ್ಳಲು ಕೋರಿದ.

ರಾಣಿ ತೀರ ದುರ್ಬಲ ಹಿನ್ನೆಲೆಯಿಂದ ಬಂದವಳಾಗಿದ್ದು, ಹಲವು ಮಕ್ಕಳಿದ್ದ, ಛಿದ್ರಗೊಂಡ ಮನೆಯುಳ್ಳ ಕುಟುಂಬದ ಕೊನೆಯ ಮಗಳಾಗಿದ್ದಳು. ಕಳೆದ ವರ್ಷ ಒಂದನೇ ತರಗತಿಗೆ ಸೇರ್ಪಡೆಗೊಂಡಿದ್ದರೂ, ವರ್ಷವಿಡೀ ಶಾಲೆಗೆ ಬಂದಿದ್ದು ಕೇವಲ 6–7 ದಿನಗಳು ಮಾತ್ರ ಎಂದು ಆಕೆಯ ಶಿಕ್ಷಕರು ಹೇಳಿದರು. ಶಿಕ್ಷಣ ಪಡೆಯಲೇಬೇಕು ಎಂದು ಆಕೆಯ ಸೋದರಿ ಹಠ ಹಿಡಿದಿದ್ದರಿಂದ, ರಾಣಿ ಶಾಲೆಗೆ ಬರುತ್ತಿದ್ದಳು. ಹಿರಿಯ ಸೋದರಿ ಎಲ್ಲಾ ಮಕ್ಕಳ ಜವಾಬ್ದಾರಿ ಹೊತ್ತುಕೊಂಡಿದ್ದು, ಏಳನೇ ತರಗತಿಯಲ್ಲಿಯೇ ಶಾಲೆ ತೊರೆದಿದ್ದಳು.

ಎನ್ಇಪಿ 2020 ಹೇಳುವಂತೆ,, '2016–17ರ ಯು–ಡೈಸ್ (U-DISE 2016-17) ಅಂಕಿ–ಅಂಶದ ಪ್ರಕಾರ, ಪ್ರಾಥಮಿಕ ಹಂತದಲ್ಲಿ ಶೇ.19.6ರಷ್ಟು ಪರಿಶಿಷ್ಟ ಜಾತಿಗೆ ಸೇರಿದ ಮಕ್ಕಳು ಇದ್ದು, ಉನ್ನತ ಪ್ರಾಥಮಿಕ ಶಾಲೆ ಹಂತದಲ್ಲಿ ಇದು ಶೇ.17.3ಕ್ಕೆ ಕುಸಿಯುತ್ತದೆ. ಶಾಲೆ ತೊರೆಯುವ ಪರಿಶಿಷ್ಟ ವರ್ಗದ ಮಕ್ಕಳ ಪ್ರಮಾಣ ಶೇ.10.6ರಿಂದ ಶೇ.6.8 ಹಾಗು ವಿಶೇಷ ಸಾಮರ್ಥ್ಯದ ಮಕ್ಕಳಲ್ಲಿ ಶೇ.1.1ರಿಂದ ಶೇ.0.25ಕ್ಕೆ ಕುಸಿಯುತ್ತದೆ. ಈ ವರ್ಗದಲ್ಲಿ ಶಾಲೆ ತೊರೆಯುವ ಹೆಣ್ಣುಮಕ್ಕಳ ಪ್ರಮಾಣ ಇನ್ನಷ್ಟು ಹೆಚ್ಚು ಇದೆ. ಉನ್ನತ ಶಿಕ್ಷಣಕ್ಕೆ ದಾಖಲಾಗುವವರ ಪ್ರಮಾಣ ತೀರ ಕಡಿಮೆ' (ಸಚಿವಾಲಯ, 2020).

ಭಾರತದ ಇನ್ನಿತರ ಶಾಲೆಗಳಂತೆ ಈ ಶಾಲೆಯಲ್ಲಿನ ವಿದ್ಯಾರ್ಥಿಗಳು ಕೂಡ ನಾನಾ ಸಾಮಾಜಿಕ ಹಾಗು ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ಅವರು ವಿಷಯವನ್ನು ಗ್ರಹಿಸುವ ರೀತಿ, ಕಲಿಕೆ, ಮನೆಕೆಲಸ, ತರಗತಿಯಲ್ಲಿ ನಿದ್ದೆ ಮಾಡುವುದು, ಅವರ ಉಡುಗೆತೊಡುಗೆ, ಮಾತುಕತೆ ಇತ್ಯಾದಿ ಅವರ ಬದುಕಿನ ಪರಿಸ್ಥಿತಿ ಹಾಗು ಅವರು ಹೇಗೆ ಬದುಕಬೇಕೆಂದು ನಿರ್ಧರಿಸಲ್ಪಟ್ಟಿರುತ್ತದೋ, ಅದನ್ನು ಆಧರಿಸಿರುತ್ತದೆ. ಸಣ್ಣ ವಯಸ್ಸಿನ ಹೆಣ್ಣು ಮಗು, ಪ್ರತಿದಿನ ಶಾಲೆಗೆ ಬರುವುದು ಹೊರತುಪಡಿಸಿ ಬೇರೇನು ಮಾಡಲು ಸಾಧ್ಯವಿದೆ? ತರಗತಿಯಲ್ಲಿರುವ ಇತರರಿಗೆ ಹೋಲಿಸಿದರೆ, ಆಕೆ ಓದಿನಲ್ಲಿ ಬಹಳ ಹಿಂದುಳಿದಿದ್ದರೆ, ಅದನ್ನು ನಾವು ಗಂಭೀರವಾಗಿ ಪರಿಗಣಿಸಬೇಕೆಂದಿಲ್ಲ. ಏಕೆಂದರೆ, ಶಿಕ್ಷಕರೊಬ್ಬರು ಹೇಳಿದಂತೆ, 'ಅವಳು ಶಾಲೆಗೆ ಬರುತ್ತಿದ್ದಾಳಲ್ಲ, ಅದೇ ದೊಡ್ಡದು'.

ಈ ಹೊರಗಿಡುವಿಕೆಗೆ ಬೇರೆಬೇರೆ ಕಾರಣಗಳಿರಬಹುದು. ಆಕೆ ಬಹುತೇಕ ಗೈರುಹಾಜರಾಗಿದ್ದ ಹಿಂದಿನ ವರ್ಷದ ಅಂತ್ಯದಲ್ಲಿ ಆಕೆಯ ತರಗತಿಯ ಹೆಚ್ಚಿನ ವಿದ್ಯಾರ್ಥಿಗಳು ಪರಸ್ಪರ ನಿಕಟವಾಗಿದ್ದರು. ಅವರ ಮನೆಗಳು ಅಕ್ಕಪಕ್ಕದಲ್ಲೇ ಇದ್ದವು ಹಾಗು ಶಾಲೆ ಮುಗಿದ ಬಳಿಕವೂ ಅವರು ಪರಸ್ಪರ ಭೇಟಿಯಾಗುತ್ತಿದ್ದರು. ನಾನಾ ಹಬ್ಬಗಳನ್ನು ಒಟ್ಟಿಗೆ ಆಚರಿಸುತ್ತಿದ್ದರು. ಆದರೆ, ರಾಣಿಯ ಪ್ರಕರಣ ಭಿನ್ನವಾಗಿತ್ತು. ಆಕೆ ಗ್ರಾಮದ ಇನ್ನೊಂದು ಭಾಗದಿಂದ ಬರುತ್ತಿದ್ದಳು. ಆಕೆಯನ್ನು ಹೊರತುಪಡಿಸಿ ಅದೇ ಸಮುದಾಯದ ಇಬ್ಬರು ಬಾಲಕರು ಬಿಟ್ಟರೆ, ಬೇರೆ ಯಾರೂ ಆ ಪ್ರದೇಶದಿಂದ ಬರುತ್ತಿರಲಿಲ್ಲ. ಇದನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು ಎನ್ನುವುದನ್ನು ನಿಮಗೇ ಬಿಡುತ್ತೇನೆ: ಜಗತ್ತಿನ ಅತ್ಯಂತ ರಾಚನಿಕ ಹಾಗುಅಧಿಕಾರ ಸಂಬಂಧಿತವಾದ ಅಸಮಾನತೆ, ಆದರೆ, ಆಳವಾಗಿ ಬೇರೂರಿರುವ ಆಚರಣೆಯಾದ ಜಾತಿಯನ್ನು ಅರ್ಥೈಸುವುದು ಹೇಗೆ?

ಆನಂತರ, ನವೆಂಬರ್ 14ರ ಮಕ್ಕಳ ದಿನಾಚರಣೆಯಂದು, ಈ ಘಟನೆ ಸಂಭವಿಸಿತು:

ಅಂದು ಸಂಪೂರ್ಣ ತಮಾಷೆಯ ಹಾಗು ಸಂತಸಕರ ದಿನವಾಗಿತ್ತು. ಬಾಲಕರನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಿ, ಕಬಡ್ಡಿ ಆಡಿಸಲಾಯಿತು. ಶಿಕ್ಷಕರು ಹೇಳಿದರು, 'ಹೆಣ್ಣು ಮಕ್ಕಳಿಗೆ ಕರವಸ್ತ್ರ ಎತ್ತಿಕೊಳ್ಳುವ ಆಟ ಆಡಿಸಲಾಗುತ್ತದೆ'. ಬಾಲಕಿಯರನ್ನು ನಾಲ್ಕು ಗುಂಪುಗಳಾಗಿ ವಿಭಾಗಿಸಲಾಯಿತು. ಆ ಆಟ ಆಡುವುದು ಹೀಗೆ: ಕರವಸ್ತ್ರವನ್ನು ಮಧ್ಯದಲ್ಲಿರಿಸಿ, ತಂಡದ ಪ್ರತಿಯೊಬ್ಬರಿಗೂ ಒಂದೊಂದು ಸಂಖ್ಯೆಯನ್ನು ನೀಡಲಾಗುತ್ತದೆ. ಬೇರೆ ತಂಡದ ಸದಸ್ಯರಿಗೂ ಇದೇ ರೀತಿ ಸಂಖ್ಯೆಯೊಂದನ್ನು ಕೊಡಲಾಗುತ್ತದೆ. ಆಟ ಆಡಿಸುವಾತ ಯಾವುದೇ ಸಂಖ್ಯೆಯೊಂದನ್ನು ಹೇಳಿದಾಗ, ಎರಡೂ ತಂಡದಲ್ಲಿರುವ ಆ ಸಂಖ್ಯೆಯನ್ನು ಹೊಂದಿರುವ ಬಾಲಕಿಯರು ಓಡಿ ಹೋಗಿ ಕರವಸ್ತ್ರ ಎತ್ತಿಕೊಳ್ಳಬೇಕು. ಹಾಗೆ ಎತ್ತಿಕೊಳ್ಳುವ ಸದಸ್ಯೆಯ ತಂಡಕ್ಕೆ ಒಂದು ಅಂಕ ದೊರೆಯುತ್ತದೆ.

ರಾಣಿ ಆಟಕ್ಕೆ ಸೇರುವ ಆಸಕ್ತಿ ತೋರಿಸಲಿಲ್ಲ. ಆಕೆಯನ್ನು ನಾವು ಒತ್ತಾಯಿಸಿ ಸೇರಿಸಿದೆವು. ಆಟ ಮುಂದುವರಿದು, ಒಂದು ತಂಡ ಗೆಲುವು ಸಾಧಿಸಿತು. ಆನಂತರ ಶಿಕ್ಷಕಿಯೊಬ್ಬರು ಧ್ವನಿವರ್ಧಕದ ಮೂಲಕ ಹಾಡೊಂದನ್ನು ಕೇಳಿಸಿದರು. ಅದು ಛತ್ತೀಸ್‌ಗಢದ ಜನಪ್ರಿಯ ಹಾಡು. ಹಾಡಿಗೆ ಬಾಲಕಿಯರು ಜೋಡಿಯಲ್ಲಿ ನರ್ತಿಸಬೇಕಿತ್ತು. ಹಾಡಿಗೆ ಅನುಗುಣವಾಗಿ ನರ್ತಿಸುವುದು ರಾಣಿಗೆ ಕಷ್ಟವಾಗುತ್ತಿತ್ತು. ಸಹಪಾಠಿ ಲಾಲಿ, ರಾಣಿಯ ಕೈಹಿಡಿದುಕೊಂಡು ಹಾಡಿಗೆ ನರ್ತಿಸಲಾರಂಭಿಸಿದ್ದನ್ನು ನಾನು ನೋಡಿದೆ. ಆಗ ರಾಣಿಯ ಮುಖ ವಿಶಿಷ್ಟವಾಗಿ ಬೆಳಗಿದ್ದನ್ನು ನಾನು ಕಂಡೆ. ಅದೊಂದು ಸುಂದರ ಕ್ಷಣವಾಗಿತ್ತು. ಅದು ನನ್ನ ಬದುಕಿನ ಅತ್ಯಂತ ಉತ್ತಮ ಮಕ್ಕಳ ದಿನಾಚರಣೆಯಾಗಿತ್ತು.

ದಿನ ಕಳೆದಂತೆ ತರಗತಿಯಲ್ಲಿ ಮಕ್ಕಳು ಹೆಚ್ಚು ಕ್ರಿಯಾಶೀಲ–ರಾಗುತ್ತಿದ್ದುದನ್ನು ನಾನು ಗಮನಿಸಿದೆ. ಜೊತೆಗೆ, ವಿದ್ಯಾರ್ಥಿಗಳ ಬಗ್ಗೆ ಶಿಕ್ಷಕರ ಕಾಳಜಿ ಹಾಗು ಔದಾರ್ಯ ಕೂಡ ಹೆಚ್ಚಿದ್ದನ್ನೂ ಕಂಡೆ. ಪ್ರತಿಯೊಂದು ಮಗುವಿನ ಬಗ್ಗೆ, ಆತ/ಕೆಯ ಕಲಿಕಾಮಟ್ಟ, ಅವರ ಹಿನ್ನೆಲೆಯು ಕಲಿಕೆ ಮೇಲೆ ಹೇಗೆ ಪರಿಣಾಮ ಬೀರುತ್ತಿದೆ ಹಾಗುನಾವು ಏನು ಸಹಾಯ ಮಾಡಬೇಕು ಎನ್ನುವ ಬಗ್ಗೆ ಶಿಕ್ಷಕರು ಸುದೀರ್ಘ ಚರ್ಚೆ ಮಾಡಲಾರಂಭಿಸಿದರು. ನಾನು ತರಗತಿಯ ಸಮ್ಮಿಶ್ರ ಗುಂಪನ್ನು ನೆನಪಿನಲ್ಲಿ ಇಟ್ಟುಕೊಂಡು, ಪ್ರತಿಯೊಂದು ಪಾಠವನ್ನೂ ಹೆಚ್ಚು ಸಮಗ್ರವಾಗಿರುವಂತೆ, ಒಳಗೊಳ್ಳುವಂತೆ ಹಾಗು ಕಲಿಕೆಯು ಖುಷಿಯಾಗಿರುವಂತೆ ಯೋಜಿಸುತ್ತಿದ್ದೆ. ಒಂದು ವಾರ ಕಾಲ ವಿದ್ಯಾರ್ಥಿಗಳ ಹೆಸರಿನಲ್ಲಿ ನಾನಾ ಚಟುವಟಿಕೆಗಳನ್ನು ನಡೆಸಿದೆವು. ಸಂಪೂರ್ಣ ತಮಾಷೆಮಯವಾಗಿತ್ತು. ಕೊನೆಯ ದಿನ ಒಗಟಿನ ಆಟವನ್ನು ಯೋಜಿಸಿದೆವು. ಕೊಠಡಿಯ ಒಂದು ಬದಿಯಲ್ಲಿ ಒಗಟನ್ನು ಹಾಗು ಇನ್ನೊಂದು ಬದಿಯಲ್ಲಿ ಅಕ್ಷರಗಳ ಕಾರ್ಡ್‌ಗಳನ್ನು ಇರಿಸಿದೆವು.

ಶಿಕ್ಷಕರು ಸೀಟಿ ಊದಿದರು.. 1....2....3....

ಅಯಾನ್, ಮನು, ವಾಸು, ನಿಮ್ಮಿ, ಹೇಮಾ ಹಾಗು ಕ್ರಿಷ್ ಓಡಿಹೋಗಿ, ಕಾರ್ಡ್ ಎತ್ತಿಕೊಂಡು ಹಿಂದಿರುಗಿ, ಅದನ್ನು ಒಗಟಿನ ಮೇಲೆ ಇರಿಸಿದರು. ಆದರೆ, ಮನುಗೆ ಬೇಕಿದ್ದ ಅಕ್ಷರದ ಕಾರ್ಡ್ ಸಿಗಲಿಲ್ಲ, ಆತ ಹುಡುಕುತ್ತಲೇ ಇದ್ದ. ಅದೇ ಹೊತ್ತಿನಲ್ಲಿ ಆತನ ಸ್ನೇಹಿತರು ಅತ್ತಿಂದಿತ್ತ ಓಡಾಡುತ್ತಿದ್ದರು. ಒಗಟು ಪೂರ್ಣಗೊಳಿಸಿದ ಕ್ರಿಷ್ ಕೂಗಿಕೊಂಡ, 'ನಾನು ಗೆದ್ದೆ, ನಾನು ಗೆದ್ದೆ'.

ಉಳಿದವರೂ ಇದನ್ನೇ ಮಾಡಿದರು. ಆನಂತರ, ಮೂಲೆಯಲ್ಲಿ ಬೇಸರದಿಂದ ಕುಳಿತಿದ್ದ ಮನು ಅವರ ಕಣ್ಣಿಗೆ ಬಿದ್ದನು. ಕ್ರಿಷ್ ಹಾಗು ವಾಸು, ಮನುವಿನ ಒಗಟಿನ ಅಕ್ಷರಗಳನ್ನು ಹುಡುಕಿ, ಪೂರ್ಣಗೊಳಿಸಿದರು. ಬಳಿಕ ಕೂಗಿದರು, 'ಮನು ಗೆದ್ದ, ಮನು ಗೆದ್ದ'.

ನಾನು ಹಳೆಯ ಆಲೋಚನೆಗಳನ್ನು ತ್ಯಜಿಸುತ್ತ ಮತ್ತು ನಿರಚನಗೊಳಿಸುತ್ತ, ಮಕ್ಕಳಿಂದ ಪ್ರತಿದಿನವೂ ಹೆಚ್ಚುಹೆಚ್ಚು ಕಲಿಯುತ್ತಿದ್ದೆ. ಒಳಗೊಳ್ಳುವಿಕೆಯು, ಅದರಲ್ಲೂ ವಿಶೇಷವಾಗಿ ಮಕ್ಕಳ ವಿಷಯದಲ್ಲಿ, ಪರಸ್ಪರ ತೊಡಗಿಸಿಕೊಳ್ಳುವುದರಿಂದ ಆರಂಭವಾಗುತ್ತದೆ ಎಂದು ಅವರು ನನಗೆ ಕಲಿಸಿದರು. ಒಳಗೊಳ್ಳುವಿಕೆಯು ಒಟ್ಟಾಗಿರುವುದು ಹಾಗು ಪರಸ್ಪರ ಒಬ್ಬರಿಗೊಬ್ಬರು ನೆರವಾಗುವುದರ ತೆಳುಪದರವಾಗಿದೆ.



**ಸುಹೈಲ್ ಅಬ್ದುಲ್ ಹಮೀದ್**, ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಛತ್ತೀಸ್‌ಗಢದ ಧಮ್‌ತರಿ ಜಿಲ್ಲೆಯ ನಾಗ್ರಿ ವಿಭಾಗದ ಸಹಾಯಕ ಸಂಪನ್ಮೂಲ ವ್ಯಕ್ತಿ. ಜಮಿಯಾ ಮಿಲಿಯಾ ಇಸ್ಲಾಮಿಯಾದಿಂದ ಪದವಿ ಹಾಗು ಪಾಂಡಿಚೆರಿ ವಿಶ್ವವಿದ್ಯಾಲಯದಿಂದ ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಕೊಚ್ಚಿ-ಮುಜ್ರೀಸ್-ಬೈಯೆನಾಯಲ್‌ನಲ್ಲಿ ಚಿಲ್ಡ್ರನ್ಸ್ ಆರ್ಟ್ ರೂಂ ಪ್ರಾಜೆಕ್ಟ್‌ನಲ್ಲಿ ಸ್ವಯಂಸೇವಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇಮೇಲ್: suhail.hameed@azimpremjifoundation.org

ಅನುವಾದ: **ಮಾಧವ ಐತಾಳ** । ಪರಿಶೀಲನೆ: **ಲತಾ ಕೆ.ಸಿ.**

**ಲಿಂಗ ಅಸ್ಮಿತೆಯ ಅರಿವು ಎಳವೆಯಲ್ಲೇ ಪ್ರಾರಂಭವಾಗುತ್ತದೆ. ಹೀಗಾಗಿ, ನಾವು ಲಿಂಗ ಎನ್ನುವುದು ಯುಗ್ಮವಲ್ಲ; ಬದಲಾಗಿ, ಒಂದು ವರ್ಣಪಟಲ ಎಂಬುದನ್ನು ತಿಳಿದುಕೊಳ್ಳಬೇಕು. ನಿಮ್ಮ ತರಗತಿಗಳಲ್ಲಿ ಮಕ್ಕಳಿಂದ ನಿಗದಿತ ಲಿಂಗಸಂಬಂಧಿತ ಪಾತ್ರ ಹಾಗು ವರ್ತನೆಗಳನ್ನು ನಿರೀಕ್ಷಿಸಬೇಡಿ. ಬದಲಾಗಿ, ಕತೆಗಳಲ್ಲಿ ಲಿಂಗ ಪಾತ್ರಗಳಿಗೆ ಸವಾಲೆಸೆಯಿರಿ ಮತ್ತು ವಿದ್ಯಾರ್ಥಿಗಳು ತಮ್ಮದೇ ಊಹೆಗಳನ್ನು ಹಾಗು ಆಲೋಚನೆಗಳನ್ನು ಪರಿಶೀಲಿಸಲು, ಅವರಿಗೆ ನೆರವಾಗಿ.**

**–ಪ್ರಿಯಾ ಕೃಷ್ಣಮೂರ್ತಿ, ಕ್ರಿಯೇಟಿಂಗ್ ಜೂನಿಯರ್ ಸಿಟಿಜನ್ಸ್–ಫೈವ್ ಕಾಮನ್ ಪಾಥ್‌ವೇಸ್, ಪು. 82.**